**ಮರು ಪ್ರಮಾಣೀಕರಿಸಲಾದ ದಿನಾಂಕ: 10.04.2026 .**

**ಪಾಟೀ ಸವಾಲು : ಆರೋಪಿ ಪರ ಶ್ರೀ. T.K.R ವಕೀಲರಿಂದ :-**

ತಿಪಟೂರಿನಿಂದ ಬೋಚಿಹಳ್ಳಿ ಗೇಟಿಗೆ ಸುಮಾರು 8-10 ಕಿ.ಮೀ ದೂರವಿದೆ. ನಾವು ನಮ್ಮ ಅಬಕಾರಿ ಕಛೇರಿಯನ್ನು ನೇರವಾಗಿ ಬೋಚಿಹಳ್ಳಿ ಗೇಟಿನ ಬಳಿ ತೆರಳಿರುತ್ತೇವೆ. ಬೋಚಿಹಳ್ಳಿ ಗೇಟಿನಿಂದ ನೇರವಾಗಿ ಹೋಗುವ ಮಾರ್ಗವು ತುರುವೇಕೆರೆ, ಎಡೆಯೂರು, ನಾಗಮಂಗಲ ಹಾಗೂ ಮೈಸೂರಿಗೆ ಸೇರುತ್ತದೆ ಎಂದರೆ ಸರಿ. ಆ ದಿನದಯಿ ನಮ್ಮೊಂದಿಗೆ ಚಾಸಾ-1, 3, 4 ಹಾಗೂ ನಮ್ಮ ವಾಹನ ಚಾಲಕ ಇದ್ದರು. ಅವರ ಹೆಸರು ಚಂದ್ರಶೇಖರ್. ಚಾಲಕನ ಕಡೆಯಿಂದ ಪಂಚನಾಮೆಗೆ ಯಾವುದೇ ಸಹಿಯನ್ನು ಹಾಕಿಸಿರುವುದಿಲ್ಲ, ಆದರೆ ಅವರು ಅಲ್ಲಿ ಇದ್ದರು. ನಮ್ಮ ಇಲಾಖಾ ವಾಹನ ಸಂಖ್ಯೆಯು KA-44-G-24 Bolero Vehicle ನಲ್ಲಿ ತೆರಳಿರುತ್ತೇವೆ. ಸರ್ಕಾರಿ ವಾಹನ ಆಗಿರುವ

ಕಾರಣ ನಿಪಿ-1 ರಲ್ಲಿ ನಮೂದು ಮಾಡಿರುವುದಿಲ್ಲ. ನಮ್ಮ ಹೇಳಿಕೆಯಲ್ಲಿ ಸದರಿ Bolero Vehicle ನ ಬಗ್ಗೆ ನಮೂದು ಮಾಡಿರುವುದಿಲ್ಲ. ಸದರಿ ಮಾರ್ಗವಾಗಿ ದಿನಕ್ಕೆ ಸುಮಾರು 2000 ದಿಂದ 3000 ದಷ್ಟು ವಾಹನಗಳು ಓಡಾಡುತ್ತವೆ ಎಂದರೆ ನನಗೆ ಗೊತ್ತಿಲ್ಲ. ಬೋಚಿಹಳ್ಳಿಯ ಗೇಟಿನ ಅಕ್ಕಪಕ್ಕದಲ್ಲಿ ಸುಮಾರು 20 ರಿಂದ 30 ಮನೆಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿಂದ 100 ಮೀಟರ್ ದೂರದಲ್ಲಿ ಇರುವುದಾಗಿ ನುಡಿಯುತ್ತಾರೆ. ಸದರಿ ಗೇಟಿನ ಬಳಿ ಒಂದು ಬಸ್ಸು ನಿಲ್ಲುವ ತಂಗುದಾಣ ಇದೆ ಎಂದರೆ ಸರಿ. ಆದರೆ ಅಲ್ಲಿ ಯಾರೂ ಸೇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ತುಂಗುದಾಣದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವನಿಕರು ತಿಪಟೂರಿನಿಂದ ತುರುವೇಕೆರೆಗೆ ಪ್ರತಿನಿತ್ಯ ಓಡಾಡುತ್ತಾರೆ ಎಂದರೆ ಇರಬಹುದು.

ಆರೋಪಿ ಆ ದಿನದಂದು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂಬುದನ್ನು ಹೇಳಲು ನನಗೆ ನೆನಪಿಲ್ಲ. ಆರೋಪಿಯು ನಿಪಿ-1 ರಲ್ಲಿ ಹೇಳಿರುವ ಹಾಗೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದುಕೊಂಡು ಬರುತ್ತಿದ್ದರು. ನೀವು ಅಮಾನತ್ತುಪಡಿಸಿಕೊಂಡ ಸಮಯದಲ್ಲಿ ಯಾವುದಾದರೂ ಭಾವಚಿತ್ರ ಹಾಗೂ ವಿಡಿಯೋವನುನ ತೆಗೆದಿದ್ದೀರ ಎಂದು ಕೇಳಿದಾಗ ಆ ಸಮಯಲ್ಲಿ ಸಾಕ್ಷಿಯು BNSS ಕಾಯಿದೆ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮ್ಮ ಮೊಬೈಲಿನಿಂದ ಚಿತ್ರವನ್ನು ಸೆರೆ ಹಿಡಿಯಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ದಾಳಿ ಮಾಡುವ ಯೋಚನೆಯಿರಲಿಲ್ಲ ಹಾಗೂ ಅದರ ಬಗ್ಗೆ ಯೋಚಿಸಿರಲಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ನೆಲೆಸಿದ್ದ ಸಾರ್ವಜನಿಕರು ಉಪಚುನಾವಣೆ ಇದ್ದ ಕಾರಣ ನಾವು ಬರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಂಗತಿಯನ್ನು ನಿಪಿ-1 ರಲ್ಲಿ ಜನರು ನಿರಾಕರಿಸಿರುವುದಾಗಿ ನುಡಿದಿರುತ್ತೇನೆ. ನಮಗೆ FSL ವರದಿಯ ದಿಃ02.05.2023 ರಂದು ನೀಡಿರುತ್ತಾರೆ. ನಿಮ್ಮ ಕಛೇರಿಯಿಂದ ಯಾವುದೇ ಮುದ್ದೆಮಾಲನ್ನು FSL ಗೆ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅದರಂತೆ ದಿಃ05.06.2023 ರಂದು ಚಾಸಾ-4 ರವರಿಗೆ ಯಾವುದೇ ವರದಿಯನ್ನು ತಂದು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನದಂದು ನೀವಾಗಲೀ, ನಿಮ್ಮ ಇಲಾಖೆಯ ಸಿಬ್ಬಂದಿ ಅಥವಾ ಅಧಿಕಾರಿಗಳಾಗಲೀ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನದಂದು ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಮುದ್ದೆಮಾಲನ್ನು

ಅಮಾನತ್ತುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನದಂದು ಆರೋಪಿ ಯಾವ ಬೈಕಿನಲ್ಲಿ ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ, ನೀವು ಆತನನ್ನು ದಾಳಿ ಮಾಡಿ ಪ್ರಕರಣಕ್ಕೆ ಒಳಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಠಾಣೆಯ ಅಂಕಿ ಅಂಶಕ್ಕೆಂದು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ಮೇಲಾಧಿಕಾರಿಗಳ ಮಾತು ಕೇಳಿ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಬೋಚಿಹಳ್ಳಿಯ ಗೇಟಿನ ಬಳಿ ಸ್ಥಳೀಕರು ನಮ್ಮನ್ನು ಗುರುತಿಸಿರುವುದಿಲ್ಲ. ಏಕೆಂದರೆ ನಾವು ಸಿವಿಲ್ ಡ್ರೆಸ್ ನಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ನಿಪಿ-1 ಕ್ಕೆ ನೀವು ಘಟನಾ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ, ಬದಲಾಗಿ ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ನ್ನು ನಾನೇ ಕೃತ್ಯ ನಡೆದ ಸ್ಥಳದಲ್ಲಿ ಬೆರಳಚ್ಚು ಮಾಡಿರುತ್ತೇನೆ. ಅದನ್ನು ನಿಪಿ-1 ರಲ್ಲಿ ನಮೂದು ಮಾಡಿರುವುದಿಲ್ಲ. ಘಟನಾ ಸ್ಥಳದಲ್ಲೇ ನಾವು ನಿಪಿ-1 ರ ಪ್ರಿಂಟ್ ಔಟ್ ತೆಗೆದಿರುತ್ತೇವೆ. ನೀವು ಆ ದಿನದಂದು ಯಾವುದೇ ಬೊಲೆರೊ ವಾಹನದಲ್ಲಿ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ನಿಪಿ-1 ರಂತೆ ಪಂಚನಾಮೆಯನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವ ಆರೋಪಿಯ ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ತೋರಿಸುವುದಕ್ಕೆ ನೀವೇನಾದರೂ ಭಾವಚಿತ್ರವನ್ನು ತೆಗೆದಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಆದರೆ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಯು ನಮ್ಮ ಬಳಿ ಇದೆ ಎಂದು ನುಡಿಯುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿದ್ದು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು**